O.S. No. 214-2017 PW-1

ದಿನಾಂಕಃ 28-06-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರವಾಗಿ ಶ್ರೀ. ವಿ.ಆರ್.ಎಚ್ . ವಕೀಲರಿಂದಃ**

15. ನಿಪಿ 5 ದಾಖಲೆಯನ್ನು ನಾನು ಯಾವಾಗ ಪಡೆದುಕೊಂಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಪತ್ರವೂ ಯಾವ ಆಸ್ತಿಗೆ ಸಂಬಂಧಿಸಿರುತ್ತದೆ ಎಂದು ನನಗೆ ನೆನಪಿಲ್ಲಾ. ದಿಃ 28-07-2017 ರಂದು ಪ್ರತಿವಾದಿಯು ಖರೀದಿ ಪತ್ರವನ್ನು ಮಾಡಿಕೊಂಡಿರುತ್ತಾರೆ. ಸದ್ರಿ ಪತ್ರಕ್ಕೆ ನಾನು ಸಾಕ್ಷಿದಾರಳಾಗಿ ನಾನು ಸಹಿ ಮಾಡಿರುವುದಿಲ್ಲ. ಸದ್ರಿ ಪತ್ರಕ್ಕೆ ಎಷ್ಟು ಜನ ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸದ್ರಿ ದಾಖಲೆಯನ್ನು ನಾನು ಎಲ್ಲಿಂದ ಪಡೆದುಕೊಂಡಿರುತ್ತೇನೆ ಎಂದು ನನಗೆ ನೆನಪಿಲ್ಲಾ. ನಾವು 1989 ರಿಂದಲೂ ದಾವಾಸ್ತಿಯಲ್ಲಿ ಕಬ್ಜಾದಲ್ಲಿರುತ್ತೇವೆ. ನಿಪಿ 5 ಖರೀದಿ ಪತ್ರವಾದ ಬಳಿಕ ಪ್ರತಿವಾದಿಯರನ್ನು ಸುಮಾರು 2 ಬಾರಿ ಭೇಟಿಯಾಗಿರುತ್ತೇನೆ.

16. ನಿಪಿ 6 ದಾಖಲೆಯನ್ನು ನಾನು ಎಲ್ಲಿಂದ ಪಡೆದುಕೊಂಡಿದ್ದೇನೆ ಎಂದು ನನಗೆ ನೆನಪಿಲ್ಲಾ. ಸದ್ರಿ ಪತ್ರವನ್ನು ಯಾರು ಯಾರಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 6 ನ್ನು ನಿಪಿ 1 ದಾಖಲೆ ಮಾಡಿಕೊಳ್ಳುವ ಮುಂಚೆ ಅಥವಾ ಬಳಿಕ ಮಾಡಿಕೊಂಡಿರುತ್ತೇವೆ ಎಂದು ನನಗೆ ನೆನಪಿಲ್ಲಾ. ನಿಪಿ 6 ರಲ್ಲಿ ಬರೆದಿರುವ ಒಕ್ಕಣಿಕೆಗಳು ನನಗೆ ಗೊತ್ತಿಲ್ಲ. ನಿಪಿ 1 ದಾಖಲೆಯನ್ನು ಮಾಡಿಕೊಳ್ಳುವ ಕಾಲಕ್ಕೆ ಪ್ರತಿವಾದಿಗೆ ನಾನು 19000-00 ಹಣವನ್ನು ನೀಡಿರುತ್ತೇನೆ. ಉಳಿದ ಹಣವನ್ನು ಪ್ರತಿವಾದಿಗೆ ನೀಡಿದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಹಾಜರು ಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಅದಕ್ಕೆ ಸಂಬಂಧಿಸಿದ ಯಾವುದೇ ಲಿಖಿತ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲ.

17. ಯಾವುದೇ ದಾಖಲೆಯನ್ನು ಮಾಡಿಕೊಳ್ಳುವ ಕಾಲಕ್ಕೆ ಪ್ರತಿ ಪುಟಕ್ಕೆ ಸಹಿ ಮಾಡುವ ವಿಷಯ ನನಗೆ ಗೊತ್ತು. ನಿಪಿ. 1 ದಾಖಲಾತಿ ಪ್ರತಿಪುಟಕ್ಕೆ ನಾವು ಸಹಿ ಮಾಡಿರುವುದಿಲ್ಲ. ಕೇವಲ ಕೊನೆಯ ಪುಟಕ್ಕೆ ಸಹಿ ಮಾಡಿರುತ್ತೇವೆ. ನಿಪಿ 1 ದಾಖಲೆಯ 2 ಪುಟಕ್ಕೂ ಸೇರಿ ನೋಟರಿ ಸೀಲ್ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಪ್ರತಿ ಪುಟಕ್ಕೂ ಚಿತ್ತುಗಳ ಸಂಖ್ಯೆ ಗಳನ್ನು ನಮೂದು ಮಾಡಿರುವುದಿಲ್ಲ. ಸದ್ರಿ ದಾಖಲೆಗೆ ಯಾವುದೇ ಚಿತ್ತುಗಳು ಇರುವುದಿಲ್ಲ. ನಿಪಿ 1 ದಾಖಲೆ ಮಾಡಿಕೊಳ್ಳುವ ಕಾಲಕ್ಕೆ ಹಣ ಸಂದಾಯ ರಶೀದಿಯನ್ನು ಪಡೆದುಕೊಂಡಿರುವುದಿಲ್ಲ.

18. ದಿಃ 06-08-1989 ರಿಂದಲೇ ನಾನು ಕಬ್ಜೆಯಲ್ಲಿ ಇರುತ್ತೇನೆ. ನಿಪಿ 1 ರಲ್ಲಿ ನಾನು ಕಬ್ಜೆಗೆ ಸಂಬಂಧಿಸಿದಂತೆ ಉಲ್ಲೇಖಿಸಿರುತ್ತೇವೆ. ಪ್ರತಿವಾದಿಗೆ ನೋಟೀಸನ್ನು ನೀಡುವ ಕಾಲಕ್ಕೆ ನಾನು ವಕೀಲರಿಗೆ ನಾನು ಕಬ್ಜೆಯಲ್ಲಿರುವ ವಿಷಯವನ್ನು ತಿಳಿಸಿರುತ್ತೇನೆ. ನಾನು ನೋಟೀಸನಲ್ಲಿ ಕಬ್ಜೆಯ ವಿಷಯವನ್ನು ಉಲ್ಲೇಖಿಸಿರುತ್ತಾರೆ. ನೋಟೀಸನಲ್ಲಿ ನಾನು ಬಾಕಿ ನೀಡಬೇಕಾಗಿದ್ದ ಹಣದ ಬಗ್ಗೆ ತಿಳಿಸಿರುತ್ತೇನೆ. ನಿಪಿ 1 ದಾಖಲೆಯಲ್ಲಿ ನಿಡಿ 1 ದಾಖಲೆ ಮಾಡಿಕೊಂಡ ಬಗ್ಗೆ ಉಲ್ಲೇಖ ಇದೆ ಎಂದರೆ ನನಗೆ ನೆನಪಿಲ್ಲಾ.

19. ಕಬ್ಜೆ ಪಡೆದುಕೊಂಡ ಬಳಿಕ ಯಾವುದೇ ದುರಸ್ಥಿ ಕಾರ್ಯವನ್ನಾಗಲಿ, ಹೆಚ್ಚಿನ ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಕೊಂಡಿಲ್ಲ. ಕರಾರು ಒಪ್ಪಂದ ಪತ್ರವನ್ನು ನೊಂದಣಿ ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಪ್ರತಿವಾದಿಯು ಕುಡುಕನಾಗಿದ್ದನೆಂದರೆ ನನಗೆ ಗೊತ್ತಿಲ್ಲ. ಅವರು ಕುಡಿದು ರಸ್ತೆಯ ಬಳಿ ಬಿಳುತ್ತಿದ್ದರು ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಎಂದಿಗೂ ದಾವಾಸ್ವತ್ತುನ್ನು ಕರಾರು ಒಪ್ಪಂದ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದ್ರಿ ದಾಖಲೆಯನ್ನು ಬಾಡಿಗೆ ಕರಾರು ಮಾಡಿಕೊಡುವಂತೆ ಕೋರಿ ಪ್ರತಿವಾದಿಯು ಕುಡಿದ

ನಶೆಯಲ್ಲಿರುವಾಗ ನಿಪಿ 1 ಕ್ಕೆ ಸಹಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1(ಜಿ) ಪ್ರತಿವಾದಿಯ ಪತ್ನಿಯ ಸಹಿಯನ್ನು ನಾನೇ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಉಳಿದ ಸಾಕ್ಷಿದಾರರನ್ನು ಸಹ ನಮ್ಮ ಗಂಡನ ಸ್ನೇಹಿತರನ್ನು ಕರೆಯಿಸಿಕೊಂಡು ಖೊಟ್ಟಿ ಸಹಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯ ಎಂದಿಗೂ ಸಹ ಕರಾರು ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯನ್ನು ಬೇಕಾಯ್ದೆ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

20. ಲೀಸ ಕಂ ಸೇಲ್ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲಾ. ಸುಳ್ಳು ಕಾಗದ ಪತ್ರಗಳ ಆಧಾರದ ಮೇಲೆ ದಾವೆಯನ್ನು ಸಲ್ಲಿಸಲು ನನಗೆಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ. 4 (ಎ) ಪತ್ರಿಕಾ ಪ್ರಕಟಣೆಯನ್ನು ಸಹ ಸುಳ್ಳು ಪ್ರಕರಣಕ್ಕೆ ಅನುಕೂಲವಾಂತೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಇಂದಿಗೂ ಸಹ ನಾನು ದಾವಾಸ್ತಿಯನ್ನು ಪಡೆದುಕೊಳ್ಳಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಮಾಲೀಕರು ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 1 ದಾಖಲೆಯನ್ನು ಸಹ ಪ್ರಕರಣಗೋಸ್ಕರ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅವರೇ ಕಬ್ಜೆಗೆ ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ತಿಳಿದಿದ್ದರೂ ಸಹ ಸುಳ್ಳು ದಾಖಲೆಗಳ ಆಧಾರದ ಮೇಲೆ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ